## ಪ್ರೊ. ಚೇತನ್ ಸಿಂಗ್ ನೇತೃತ್ವದಲ್ಲಿ ಸೌರಶಕ್ತಿ ಬಗ್ಗೆ ಜಾಗೃತಿ

# ಎನ್ಐಟಿಕೆಗೆ ಸ್ವರಾಜ್ ಯಾತ್ರೆ

**ಮಂಗಳೂರು:** ಸೋಲಾರ್ ಮ್ಯಾನ್ ಆಫ್ ಇಂಡಿಯಾ-ಸೋಲಾರ್ ಗಾಂಧಿ ಪ್ರೊ. ಚೇತನ್ ಸಿಂಗ್ ಸೋಲಂಕಿ ಅವರ ಸೋಲಾರ್ ಎನರ್ಜಿ ಜಾಗೃತಿಯ 'ಸ್ವರಾಜ್ ಯಾತ್ರೆ'ಯು ಬುಧವಾರ ಎನ್ಐಟಿಗೆ ಆಗಮಿಸಿದೆ.

ಸೌರ ಶಕ್ತಿಯನ್ನು ಅಳವಡಿಸಿಕೊಳ್ಳುವ ಕಡೆಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರೊ. ಚೇತನ್ ಸಿಂಗ್ ಸೋಲಂಕಿ ಅವರು 2020ರ ನವೆಂಬರ್‌ನಲ್ಲಿ ಈ ಯಾತ್ರೆಯನ್ನು ಆರಂಭಿಸಿದ್ದರು. 2030ರವರೆಗೆ ಸುಮಾರು 11 ವರ್ಷಗಳ ನಡೆಯಲಿರುವ ಈ ಯಾತ್ರೆಯನ್ನು ಅವರು ಮನೆಗೂ ಹಿಂತಿರುಗದೇ ತಮ್ಮ ಯಾತ್ರೆಯ ಸೋಲಾರ್ ಬಸ್‌ನಲ್ಲೇ ತಮ್ಮ ಜೀವನ ನಡೆಸಲು ಪ್ರತಿಜ್ಞೆಯನ್ನು ಕೂಡ ಕೈಗೊಂಡಿದ್ದಾರೆ. ಎನ್ಐಟಿಕೆಯಲ್ಲಿ ಸೋಲಂಕಿ ಅವರನ್ನು ಬರಮಾಡಿಕೊಳ್ಳಲಾಯಿತು. ಎನ್ಐಟಿಕೆ ಪ್ರಭಾರ ನಿರ್ದೇಶಕ ಪ್ರೊ.ಎಸ್.ಎಂ. ಕುಲಕರ್ಣಿ, ರಿಜಿಸ್ಟ್ರಾರ್ ರವೀಂದ್ರ ನಾಥ್ ಕೆ., ಜಂಟಿ ರಿಜಿಸ್ಟ್ರಾರ್ ರಾಮ್‌ಮೋಹನ್ ವೈ, ಡೀನ್ ಅಕಾಡೆಮಿಕ್ ಡಾ.ವಿದ್ಯಾಶೆಟ್ಟಿ ಅಸೋಸಿಯೇಟ್ ಡೀನ್‌ಗಳಾದ ಪ್ರೊ. ಕಟ್ಟಿ ಮಣಿ, ಡಾ.ಹರಿಪ್ರಸಾದ್ ದಾಸರಿ ಮತ್ತಿತರರು ಉಪಸ್ಥಿತರಿದ್ದರು



ಎನ್‌ಟಿಕೆಯಲ್ಲಿ ಪ್ರೊ. ಚೇತನ್ ಸಿಂಗ್ ಸೋಲಂಕಿ ಅವರನ್ನು ಸ್ವಾಗತಿಸಲಾಯಿತು.

- ಪ್ರೊ. ಚೇತನ್ ಸಿಂಗ್ ಸೋಲಂಕಿ ಅವರು 2020ರ ನವೆಂಬರ್‌ನಲ್ಲಿ ಯಾತ್ರೆ ಆರಂಭಿಸಿದ್ದಾರೆ
- ಸೌರಶಕ್ತಿ ಬಗ್ಗೆ ಜಾಗೃತಿಗಾಗಿ 11 ವರ್ಷ ಯಾತ್ರೆ ನಡೆಸಲು ಪ್ರತಿಜ್ಞೆ